CC : 948/2025
ಡಿ-ಡಬ್ಲ್ಯೂ- 01

ದಿನಾಂಕಃ 04-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪಿರ್ಯಾದುದಾರರ ಪರ ವಕೀಲರಿಂದಃ

ಸಂತೋಷ್ ಕುಮಾರ್ ಮತ್ತು ರವಿ ಅಮೀನ್ ರವರು ಮಲ್ಪೆ ಯಲ್ಲಿ ಕೆಲಸ ಮಾಡುತಿದ್ದರಿಂದ ನನಗೆ ಪರಿಚಯವಾಗಿರುತ್ತದೆ . ನಾನು ಮಲ್ಪೆ ಯಲ್ಲಿ ಮೀನನ್ನು ಖರೀದಿಸಿ ಮಾರಾಟ ಮಾಡುತ್ತೇನೆ. ನಾನು ಆರೋಪಿ ಸಂತೋಷ್ ಕುಮಾರ್ ಮತ್ತು ರವಿ ಅಮೀನ್ ರವರಿಂದ ಮೀನನ್ನು ಖರೀದಿಸಿ ಮಾರಾಟ ಮಾಡುತ್ತೇನೆ . ಸಂತೋಷ್ ಕುಮಾರ್ ಮತ್ತು ರವಿ ಅಮೀನ್ ಪಾಲುದಾರರು . ನನಗೆ 2-3 ದಿನಗಳಿಗೆ ಮಲ್ಪೆಯಲ್ಲಿ ಆರೋಪಿತರು ಸಿಗುತ್ತಾರೆ. ನಾನು ಮಳೆಗಾಲದಲ್ಲಿ ಬೋಟ್ ನಲ್ಲಿ ನೀರು ತುಂಬಿ ಕೊಂಡಿದ್ದರೇ ಅದನ್ನು ತೆಗೆಯುವ ಕೆಲಸ ಮಾಡುತ್ತೇನೆ. ಕೇಸನ್ನು ಹಾಕಿರುವ ಸಂತೋಷ್ ಕುಮಾರ್ ಕೂಡ ಮಲ್ಪೆ ಯಲ್ಲಿ ಪರಿಚಯವಾಗಿರುತಾರೆ . ಪಿರ್ಯಾದು ಸಂತೋಷ್ 10-15 ವರ್ಷ ಗಳಿಂದ ಪರಿಚಯಸ್ಥರು. ಪಿರ್ಯಾದು ಸಂತೋಷ್ ಜೊತೆ ಯಾವುದೇ ಮೀನಿನ ವ್ಯವಹಾರ ಇಲ್ಲ . ನಾನು ಪಿರ್ಯಾದು ಸಂತೋಷ್ ಜೊತೆ ಜಾಗದ ವ್ಯವಹಾರ ಮಾಡಿರುತ್ತೇನೆ. ಪಿರ್ಯಾದು ಸಂತೋಷ್ ಜೊತೆ ಜಾಗದ ವ್ಯವಹಾರ ಮಾಡಿದ್ದೇನೆಂದು ಹೇಳುವ ನಾನು ಅವರ ಜೊತೆ ಅಪನಂಬಿಕೆ ಇತ್ತು. ಪಿರ್ಯಾದಿ ಜಾಗ ಮಾರಾಟಕ್ಕೆ ಇದೆ ಎಂದು ಆರೋಪಿಗಳಾದ ಸಂತೋಷ್ ಕುಮಾರ್ ಮತ್ತು ರವಿ ಅಮೀನ್ ಹೇಳಿದ್ದರು. ಜಾಗದ ಸಂಬಂಧವಾಗಿ ನಾನು ಆರೋಪಿತರಿಂದ 18-07-2023 ರಂದು ಚೆಕ್ ಪಡೆದಿದ್ದೆ. ನಾನು ಒಬ್ಬಬ್ಬ ಆರೋಪಿಯ ಬಳಿ ಒಂದು ಒಂದು ಚೆಕ್ ಪಡೆದಿದ್ದೆ. ಚೆಕ್ ನಲ್ಲಿ ಏನೂ ಬರೆದಿರಲಿಲ್ಲ. ನಾನು ಪಿರ್ಯಾದಿದಾರರು ಮೋಸ ಮಾಡುತಾರೆ ಎಂದು ರೂ 10 ಲಕ್ಷ ಸಂಬಂಧಪಟ್ಟಂತೆ ಆರೋಪಿತರಿಂದ ಚೆಕ್ ನ್ನು ಪಡೆದಿದ್ದೆ . 10 ಲಕ್ಷ ಕ್ಕೆ ನಾನು ಭದ್ರತೆಗಾಗಿ ಕರಾರು ಮಾಡಿಕೊಂಡಿದ್ದೆ ಎಂದರೆ ಸರಿ. Conversion ಮಾಡಲು ಪಿರ್ಯಾದಿ ಸಂತೋಷ್ ಕುಮಾರ್ 3 ಲಕ್ಷ ಕೇಳಿದ್ದರು . ಪಿರ್ಯಾದಿ ಸಂತೋಷ್ ಕುಮಾರ್ 3 ಲಕ್ಷ ಕೊಟ್ಟ ನಂತರ ನಾನು ಚೆಕ್ ನ್ನು ವಾಪಸ್ಸು ಕೊಟ್ಟಿರುತ್ತೇನೆ . ಅವರು ಚೆಕ್ ವಾಪಸ್ಸು ಕೇಳಿದರು ನಾನು ಕೊಟ್ಟಿರುತ್ತೇನೆ . ಈ 6 ತಿಂಗಳ ನಡುವೆ ಪಿರ್ಯಾದಿ ಸಂತೋಷ್ ಕುಮಾರ್ ಮತ್ತು ನನ್ನ ನಡುವೆ ವ್ಯವಹಾರ ನಡೆದಿಲ್ಲ . ಈ 6

ತಿಂಗಳ ಸಮಯದಲ್ಲಿ ಪಿರ್ಯಾದಿ ಸಂತೋಷ್ ಕುಮಾರ್ ಜೊತೆ ಅಪನಂಬಿಕೆ ಬರುವ ಯಾವುದೇ ಘಟನೆ ನಡೆದಿಲ್ಲ. ನಾನು ಪಿರ್ಯಾದಿ ಸಂತೋಷ್ ಕುಮಾರ್ ಗೆ ಚೆಕ್ ಕೊಟ್ಟ ಬಗ್ಗೆ ಆರೋಪಿ ಸಂತೋಷ್ ಕುಮಾರ್ ಮತ್ತು ರವಿ ಅಮೀನ್ ಗೆ ಹೇಳಿಲ್ಲ. ಪಿರ್ಯಾದಿ ಪಿರ್ಯಾದಿ ಸಂತೋಷ್ ಕುಮಾರ್ ಗೆ ಆರೋಪಿತರ ಚೆಕ್ ನ್ನು ಕೊಟ್ಟಿದ್ದೇನೆ ಎಂದು ಹೇಳುವ ದಿನದಿಂದ ಆರೋಪಿ ಸಂತೋಷ್ ಕುಮಾರ್ ಮತ್ತು ರವಿ ಅಮೀನ್ ರವರನ್ನು ಅನೇಕ ಬಾರಿ ಭೇಟಿ ಆಗಿದ್ದೆ. ಕರಾರು ಮಾಡಿದ ಒಂದು ವರ್ಷದಲ್ಲಿ conversion ಮಾಡಿಕೊಡಬೇಕು ಎಂಬ ಒಪ್ಪಂದ ಆಗಿತ್ತು. ಪಿರ್ಯಾದಿ ಸಂತೋಷ್ ಕುಮಾರ್ conversion ಮಾಡಿಕೊಡಲಿಲ್ಲ. conversion ಮಾಡಿಕೊಡದೇ ಇದ್ದುರಿದಂದ ಅವರು ಮೋಸ ಮಾಡುತ್ತಾರೆ ಎಂಬ ಭಾವನೆ ಬಂದಿತ್ತು . ನೀವು ಕೊಟ್ಟ ಚೆಕ್ ನ್ನು ವಾಪಸ್ಸು ಕೊಟ್ಟಿದ್ದೇನೆ ಆದ್ದರಿಂದ ನೀವು ಏನಾದರೂ ಮಾಡಬೇಕು ಎಂದು ಆರೋಪಿ ಸಂತೋಷ್ ಕುಮಾರ್ ಮತ್ತು ರವಿ ಅಮೀನ್  ಗೆ ಹೇಳಿಲ್ಲ. ಅದನ್ನು ಹೇಳದೇ ಇರಲು ವಿಶೇಷ ಕಾರಣ ಇರಲಿಲ್ಲ . ಪಿರ್ಯಾದಿ ಪಿರ್ಯಾದಿ ಸಂತೋಷ್ ಕುಮಾರ್  ವಿರುದ್ದ ನಾನು ಕೇಸು ಹಾಕಿದ್ದೇನೆ . ಪಿರ್ಯಾದಿ ಪಿರ್ಯಾದಿ ಸಂತೋಷ್ ಕುಮಾರ್ ಜಾಗ ಬರೆದುಕೊಟ್ಟಿಲ್ಲ ಎಂದು ನಾನು ಕೇಸು ಹಾಕಿದ್ದೇನೆ . ಸದರಿ ಕೇಸಿನಲ್ಲಿ ಆರೋಪಿ ಸಂತೋಷ್ ಕುಮಾರ್ ಮತ್ತು ರವಿ ಅಮೀನ್ ರವರ ಚೆಕ್ ನ್ನು ಪಡೆದಿದ್ದೆ ಎಂದು ನಮೂದು ಮಾಡಿಲ್ಲ . ನಾನು ಪಿರ್ಯಾದಿ ಸಂತೋಷ್ ಕುಮಾರ್  ವಿರುದ್ದ  ಹಾಕಿರುವ ಅಸಲು ದಾವಾ ಸಂಖ್ಯೆ 14/2025 ರ ವಾದಪತ್ರದ ದೃಢಿಕೃತ ಪ್ರತಿಯನ್ನು ನೋಡುತಿದ್ದೇನೆ, ಸಾಕ್ಷಿ ನೋಡಿ ಒಪ್ಪಿಕೊಂಡಿದ್ದರಿಂದ ಸದ್ರಿ ವಾದಪತ್ರವನ್ನು ನಿಪಿ 8 ಎಂದು ಗುರುತಿಸಲಾಯಿತು . ಸದ್ರಿ ಸಿವಿಲ್ ಪ್ರಕರಣದಲ್ಲಿ ಪ್ರತಿವಾದಿ ಅಸಲು ದಾಖಲೆಗಳನ್ನು ಕೊಟ್ಟಿರುತಾರೆ ಎಂದು ಹೇಳಿಲ್ಲ . ಸಾಕ್ಷಿ ಮುಂದುವರಿದು ವಕೀಲರ ಬಳಿ ಹೇಳಿರುತ್ತೇನೆ . ಪೊಲೀಸರಿಗೆ ಕೊಟ್ಟ ದೂರಿನಲ್ಲಿ ಕೂಡ ಪಿರ್ಯಾದಿ ಸಂತೋಷ್  ಕುಮಾರ್ ನನ್ನಿಂದ ಚೆಕ್ ಪಡೆದು ಮೋಸ ಮಾಡಿದ್ದಾನೆ ಎಂದು ಹೇಳಿಲ್ಲ .  ನಾನು ಈ ಚೆಕ್ ಗಳ ಬಗ್ಗೆ ಪೊಲೀಸರಿಗೆ ಕೊಟ್ಟ ದೂರಿನಲ್ಲಿ ಆಗಲೀ ಅಥವಾ ದಾವೆಯಲ್ಲಿಯಾಗಲೀ ಹೇಳದೇ ಇರಲು ಕಾರಣ ನಾನು ಚೆಕ್ ನ್ನೇ ಪಡೆದಿಲ್ಲ ಎಂದರೆ ಸರಿಯಲ್ಲ . ಆರೋಪಿತರ ಚೆಕ್ ಬೌನ್ಸ್ ಆಗಿದೆ ಎಂದು ತುಂಬಾ ದಿನಗಳ ಮೊದಲು ಗೊತ್ತಾಯಿತು ಆದರೇ ದಿನಾಂಕ ನೆನಪಿಲ್ಲ . ಆರೋಪಿ ಸಂತೋಷ್  ಕುಮಾರ್  ನಿಂದ ಚೆಕ್ ಬೌನ್ಸ್ ಬಗ್ಗೆ ಗೊತ್ತಾಯಿತು . ನನ್ನಿಂದ ಪಡೆದಚೆಕ್ ನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ನಾನು ಪೊಲೀಸ್ ಠಾಣೆಗೆ ದೂರು ಕೊಡಲಿಲ್ಲ. ದೂರು ಕೊಡಲು ಆರೋಪಿ ಸಂತೋಷ್  ಕುಮಾರ್

ಹೇಳಿಲ್ಲ. ಸಂತೋಷ್ ಕುಮಾರ್ ಮತ್ತು ರವಿ ಅಮೀನ್ ರವರ ವಕೀಲರು ಕೊಟ್ಟ ಜವಾಬು ನೋಟಿಸು ಬಗ್ಗೆ ನನಗೆ ಗೊತ್ತಿಲ್ಲ . ಚೆಕ್ ಬೌನ್ಸ್ ಮಾಡಿದ ತಕ್ಷಣ ಸಂತೋಷ್ ಕುಮಾರ್ ಮತ್ತು ರವಿ ಅಮೀನ್ ನನಗೆ ಬೌನ್ಸ್ ಆದ ಬಗ್ಗೆ ಹೇಳಿರುತ್ತಾರೆ. ಆಗ ನಾನು ಸದ್ರಿ ಆರೋಪಿ ಸಂತೋಷ್ ಕುಮಾರ್ ಮತ್ತು ರವಿ ಅಮೀನ್ ರವರಿಗೆ ಚೆಕ್ ಗಳನ್ನು ಪಿರ್ಯಾದಿ ಸಂತೋಷ್ ಗೆ ಕೊಟ್ಟಿರುತ್ತೇನೆ ಎಂದು ಹೇಳಿರುತ್ತೇನೆ . ಆ ಸಮಯದಲ್ಲಿ ಪಿರ್ಯಾದಿ ಸಂತೋಷ್ ವಿರುದ್ಧ ನಾನು ಸಿವಿಲ್ ದಾವೆ ಹಾಕಿದ್ದೆ . ಸಂತೋಷ್ ಕುಮಾರ್ ಮತ್ತು ರವಿ ಅಮೀನ್ ಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಪಿರ್ಯಾದಿ ಸಂತೋಷ್ ಗೆ 3 ಲಕ್ಷ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. 3 ಲಕ್ಷ ಕೊಟ್ಟ ಬಗ್ಗೆ ದಾಖಲಾತಿ ಮಾಡಿಕೊಂಡಿಲ್ಲ . ನಾನು ಆರೋಪಿತರ ಚೆಕ್ ನ್ನು ಪಿರ್ಯಾದಿಗೆ ಕೊಟ್ಟ ಬಗ್ಗೆ ಪಿರ್ಯಾದಿಯಿಂದ ಸಹಿ ಪಡೆದಿಲ್ಲ . ಪಿರ್ಯಾದಿ ನೀಡಿದ ಸಾಲದ ಬಗ್ಗೆ ಆರೋಪಿತರಿಂದ ಪಿರ್ಯಾದಿ ಚೆಕ್ ನ್ನು ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ . ನಾನು ಎಂದೂ ಕೂಡ ಪಿರ್ಯಾದು ದಾರರ ಜೊತೆ ಜಾಗದ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಪ್ರ.ಹಿ.ಸಿ.ನ್ಯಾ ಮತ್ತು ಸಿ.ಜೆ.ಎಂ
ಉಡುಪಿ.